**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶಿಲ್ ಜಿ ನಮೋಶಿಅವರು ನಿಯಮ-72 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ.**

**ಪ್ರಶ್ನೆ**

ಮಾನ್ಯ ವಿಧಾನ ಪರಿಷತ್ತಿನ ಶ್ರೀ ಶೀಲ್ ಜಿ ನಮೋಶಿ, ಅವರು ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೋಮಾ (DPSE, English Medium)ತರಬೇತಿ ಪಡೆದಿರುವ ಅಭ್ಯರ್ಥಿಗಳಿಗೆ ಪೂರ್ವ ಪ್ರಾಥಮಿಕ ಶಿಕ್ಷಕರಾಗಿ ನೇಮಕಾತಿ ಮಾಡುವ ಕುರಿತು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ**

ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಡಿಪ್ಲೋಮ (DPSE) ಕೋರ್ಸ್‌ನ್ನು ಸರ್ಕಾರದ ಆದೇಶ ಸಂಖ್ಯೆ;ಇಡಿ 06 ಎಂ.ಪಿ.ಇ 2017. ಬೆಂಗಳೂರು. ದಿನಾಂಕ;-05.07.2019 ರಂತೆ ಪ್ರಸ್ತುತ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆ, ಕಲಬುರಗಿ ಹಾಗೂ ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ ಹೊಸದುರ್ಗ (ಚಿತ್ರದುರ್ಗ)ಇಲ್ಲಿ ಆಂಗ್ಲ ಮಾಧ್ಯಮದಲ್ಲಿ 2019-20ರಲ್ಲಿ ಪ್ರಾರಂಭವಾಗಿ ಕಳೆದ 4 ವರ್ಷಗಳಿಂದ ಸಂಸ್ಥೆಗಳು ನಡೆಯುತ್ತಿರುತ್ತದೆ. (ಸುತ್ತೋಲೆ ಪ್ರತಿ ಲಗತ್ತಿಸಿದೆ.) ಈ ಎರಡೂ ಶಿಕ್ಷಣ ಸಂಸ್ಥೆಗಳಲ್ಲಿ ಕಳೆದ 4 ವರ್ಷಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಅಂಕಿಅಂಶ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | | | | | | | |
|---|---|---|---|---|---|---|---|---|
| ವರ್ಷ | 2019-20 | | 2020-21 | | 2021-22 | | 2022-23 | |
| ವಿವರ | ದಾಖಲಾತಿ | ಉತ್ತೀರ್ಣ | ದಾಖಲಾತಿ | ಉತ್ತೀರ್ಣ | ದಾಖಲಾತಿ | ಉತ್ತೀರ್ಣ | ದಾಖಲಾತಿ | ಉತ್ತೀರ್ಣ |
| ಒಟ್ಟು(ಪ್ರಥಮ ಮತ್ತು ದ್ವಿತೀಯ) | 62 | 60 | 143 | 130 | 158 | 147 | 136 | 128 |

ಶಾಲಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು 2019-20 ನೇ ಸಾಲಿನಿಂದ ರಾಜ್ಯದ ಕೆ.ಪಿ.ಎಸ್. ಶಾಲೆಗಳಲ್ಲಿ ಅಳವಡಿಸಲಾಗಿದ್ದು ಪ್ರಸ್ತುತ ಈ ವಯೋಮಾನದ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಶಾಲಾ ಎಸ್.ಡಿ.ಎಮ್.ಸಿ. ಹಂತದಲ್ಲಿ ನಿರ್ವಹಿಸಲಾಗುತ್ತಿದೆ.

**ಸಂಖ್ಯೆ:ಇಪಿ 115 ಪಿಟಿಐ 2023**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ
ಸಚಿವರು